# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 54 ರ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಬಲವರ್ಧನೆಗೆ ಆರ್ಥಿಕ ನೆರವು ಕುರಿತು.

**ಓದಲಾಗಿದೆ:**

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋ/ಪಿಎಸ್.1/ಹೂಕಾ-ಸಂ ಆ/10/16-17, ದಿನಾಂಕ 29-04-2016/ 27-05-2016

**ಪ್ರಸ್ತಾವನೆ:**

2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-54 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ:

> **54. ನಮ್ಮ ಸರ್ಕಾರವು ಸುಸ್ಥಿರ ರೇಷ್ಮೆ ಕೃಷಿಯನ್ನು ಮುಂಚೂಣಿಗೆ ತರುವ ನಿಟ್ಟಿನಲ್ಲಿ ರೇಷ್ಮೆ ಹುಳು ತಳಿ ಅಭಿವೃದ್ಧಿ, ಸಂರಕ್ಷಣೆ ಮತ್ತು ಹಿಪ್ಪುನೇರಳೆ ಅಭಿವೃದ್ಧಿಯೂ ಸೇರಿದಂತೆ ತಾಂತ್ರಿಕ ಅನ್ವೇಷಣೆಗಳಿಗಾಗಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ (Research and Development) ೮೦ರ ದಶಕದಲ್ಲಿ ತಲಘಟ್ಟಪುರದಲ್ಲಿ ಸ್ಥಾಪಿಸಿರುವ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಬಲವರ್ಧನೆ ಮಾಡಲಿದೆ.**

ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯನ್ನು 1980-81 ರ ಅವಧಿಯಲ್ಲಿ ಸ್ಥಾಪಿಸಲಾಯಿತು. ಪ್ರಸ್ತುತ ಇಲ್ಲಿನ ವೈಜ್ಞಾನಿಕ ಉಪಕರಣಗಳು ಹಾಗೂ ಕಟ್ಟಡಗಳು 25-30 ವರ್ಷಗಳು ಹಳೆಯದಾಗಿದ್ದು, ಕಟ್ಟಡಗಳ ದುರಸ್ತಿ, ವೈಜ್ಞಾನಿಕ ಉಪಕರಣಗಳ ನವೀಕರಣ ಮತ್ತು ಸಂಶೋಧನೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಉನ್ನತೀಕರಣ ಮಾಡಬೇಕಾದ ಅವಶ್ಯಕತೆ ಇದೆ. ಪ್ರಸ್ತುತ ಸಂಸ್ಥೆಯಲ್ಲಿ ನಡೆಯುತ್ತಿರುವ ಹೊಸ ಹಿಪ್ಪುನೇರಳೆ ತಳಿಗಳ ಸಂಶೋಧನೆ, ರೇಷ್ಮೆ ಹುಳು ತಳಿಗಳ ಅಭಿವೃದ್ಧಿ, ಮಣ್ಣಿನ ಪರೀಕ್ಷೆ, ಹಿಪ್ಪುನೇರಳೆ ಕೃಷಿ ಮಾಡಲು ಸಮಗ್ರ ಬೇಸಾಯ ಪದ್ಧತಿಗಳು, ರೋಗ ನಿಯಂತ್ರಣ, ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಮತ್ತು ಗೂಡಿನನಂತರದ ಚಟುವಟಿಕೆಯಲ್ಲಿ ಹೊಸ ತಂತ್ರಜ್ಞಾನಗಳು ರೇಷ್ಮೆ ಭಾಗೀದಾರರಿಗೆ ತಲುಪಿಸಲು ಕ್ರಮವಹಿಸಲಾಗುತ್ತಿದೆ. ರೇಷ್ಮೆ ಉದ್ದಿಮೆಯ ಇತ್ತೀಚಿನ ಪರಿಸ್ಥಿಯಲ್ಲಿ ರೇಷ್ಮೆ ಉದ್ಯಮವನ್ನು ಲಾಭದಾಯಕಗೊಳಿಸಲು, ಉತ್ಪಾದನಾ ವೆಚ್ಚದಲ್ಲಿ ಕಡಿತಗೊಳಿಸಲು ಹೆಚ್ಚಿನ ಸಂಶೋಧನ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ 2016-17ನೇ ಸಾಲಿನ ಆಯವ್ಯಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಹೆಚ್ಚಿನ ಆದ್ಯತೆ ನೀಡಲು ಉದ್ದೇಶಿಸಲಾಗಿದೆ.

ಯೋಜನೆಯ ರೂಪು ರೇಷೆಗಳು ಈ ಕೆಳಕಂಡಂತಿದೆ:

- ಪ್ರಸ್ತುತ ಸಂಶೋಧನ ಸಂಸ್ಥೆಗಳು ಕೆಲವೇ ಹಿಪ್ಪುನೇರಳೆ ತಳಿ ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ಅಭಿವೃದ್ಧಿ ಪಡಿಸಿರುತ್ತಾರೆ. ರೇಷ್ಮೆ ಅಭಿವೃದ್ಧಿಯು ಈ ಕೆಲವೊಂದು ತಳಿಗಳ ಮೇಲೆ ಅವಲಂಬಿಸಿರುತ್ತದೆ. ಆದ್ದರಿಂದ ಹೊಸ ಹೆಚ್ಚು ಇಳುವರಿ ನೀಡುವ ಸುಧಾರಿತ ತಳಿಗಳ ಅಭಿವೃದ್ಧಿಗೆ ಸಂಶೋಧನೆ ಕೈಗೊಳ್ಳಲಾಗುವುದು.
- ಹಾಲಿ ಅಭಿವೃದ್ಧಿ ಪಡಿಸಿದ್ದು ಕ್ಷೇತ್ರಮಟ್ಟದಲ್ಲಿ ಪ್ರಚಲಿತದಲ್ಲಿರುವ ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುವಿನ ತಳಿಗಳ ಅನುವಂಶಿಕತೆ ನಿರ್ವಹಣೆಗೆ ಕ್ರಮಕೈಗೊಳ್ಳಲಾಗುವುದು.
- ಸಂಸ್ಥೆಯಲ್ಲಿ ಮಣ್ಣಿನ ಪರೀಕ್ಷೆ, ಹಿಪ್ಪುನೇರಳೆ ಮರ ಕೃಷಿ ಮಾಡಲು ಸಮಗ್ರ ಬೇಸಾಯ ಪದ್ಧತಿಗಳನ್ನು ಅಭಿವೃದ್ಧಿ ಪಡಿಸುವುದು.

ಪು.ತಿ.ನೋ. . . .

- ಉತ್ತರ ಕರ್ನಾಟಕದಲ್ಲಿ ರೇಷ್ಮೆ ಉದ್ಯಮ ಅಭಿವೃದ್ಧಿಗಾಗಿ ಅಗತ್ಯ ಸಂಶೋಧನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.
- ರೋಗ ನಿಯಂತ್ರಣ ರೇಷ್ಮೆ ಹುಳು ಸಾಕಾಣಿಕೆಯನ್ನು ಹೆಚ್ಚು ಲಾಭದಾಯಕಗೊಳಿಸಲು ಹಾಲಿ ಇರುವ ತಾಂತ್ರಿಕತೆಗಳನ್ನು ಉನ್ನತೀಕರಣಗೊಳಿಸಿ ನೂತನ ತಾಂತ್ರಿಕತೆಗಳ ಅವಿಷ್ಕಾರ
- ಗೂಡಿನ ನಂತರದ ಚಟುವಟಿಕೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿ ಕಾಟೇಜ್ ಬೇಸಿನ್‌ನಿಂದ ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆ, ಕಳಪೆ ಗೂಡುಗಳಿಂದ ನೂಲು ಬಿಚ್ಚಾಣಿಕೆ ಮಾಡುವುದು, ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಒದಗುವ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೆಚ್ಚಿನ ಸಂಶೋಧನೆ ನಡೆಸುವುದು ಅಗತ್ಯವಾಗಿರುತ್ತದೆ.
- ಈ ನಿಟ್ಟಿನಲ್ಲಿ ಹೊಸ ತಾಂತ್ರಿಕತೆಗಳ ಆವಿಷ್ಕಾರ ಮತ್ತು ಅವುಗಳ ಉಪಯೋಗಗಳನ್ನು ರೇಷ್ಮೆ ಭಾಗೀದಾರರಿಗೆ ತಲುಪಿಸಲು ಸಂಶೋಧನೆಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.
- ಸಂಶೋಧನೆಗಳನ್ನು ಕೈಗೊಂಡು ರೇಷ್ಮೆ ಭಾಗೀದಾರರಿಗೆ ತಲುಪಿಸಲು ಕಾರ್ಯಾಗಾರ, ತರಬೇತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.
- ಈ ಎಲ್ಲಾ ಸಂಶೋಧನ ಕಾರ್ಯಕ್ರಮಗಳನ್ನು KSSRDI ತಲಘಟ್ಟಪುರ ಸಂಸ್ಥೆಯಲ್ಲಿ ಇರುವ ಪ್ರಯೋಗಾಲಯಗಳನ್ನು ಉನ್ನತೀಕರಿಸುವುದು ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

ರೇಷ್ಮೆ ಕೃಷಿಯಲ್ಲಿ ಸುಸ್ಥಿರತೆ ತರಲು ಹೊಸ ಹಿಪ್ಪುನೇರಳೆ ತಳಿ ಹಾಗೂ ರೇಷ್ಮೆ ಹುಳು ಅಭಿವೃದ್ಧಿ ಸಂರಕ್ಷಣೆ ಸೇರಿದಂತೆ ಹೊಸ ತಾಂತ್ರಿಕ ಸಂಶೋಧನೆ ಮತ್ತು ಅಭಿವೃದ್ಧಿ ಮಾಡಲಾಗುತ್ತಿದೆ. ಅಲ್ಲದೆ ಮಣ್ಣಿನ ಪರೀಕ್ಷೆ, ಹಿಪ್ಪುನೇರಳೆ ಮರ ಕೃಷಿ ಮಾಡಲು ಸಮಗ್ರ ಬೇಸಾಯ ಪದ್ಧತಿಗಳು, ಉತ್ತರ ಕರ್ನಾಟಕದಲ್ಲಿ ರೇಷ್ಮೆ ಉದ್ಯಮ ಅಭಿವೃದ್ಧಿ, ರೋಗ ನಿಯಂತ್ರಣ, ಗೂಡಿನನಂತರದ ಚಟುವಟಿಕೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿ ಕಾಟೇಜ್ ಬೇಸಿನ್‌ನಿಂದ ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆ, ರೇಷ್ಮೆ ಉದ್ಯಮದಲ್ಲಿ ತೊಡಗಿರುವ ಭಾಗೀದಾರರಿಗೆ ಹೆಚ್ಚಿನ ನೈಪುಣ್ಯತೆಗೆ ತರಬೇತಿ ನೀಡಿ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಅಳವಡಿಸಲು ಸಂಸ್ಥೆಯ ಬಲವರ್ಧನೆ ಅತ್ಯವಶ್ಯಕವಾಗಿರುತ್ತದೆ. ಈ ಮೂಲಕ ರೇಷ್ಮೆ ಉದ್ಯಮದಲ್ಲಿ ಹೆಚ್ಚಿನ ಅಭಿವೃದ್ಧಿ ಸಾಧಿಸಲು ಉದ್ದೇಶಿಸಿದೆ.

ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಹೊಸ ಹಿಪ್ಪುನೇರಳೆ ತಳಿ ಮತ್ತು ರೇಷ್ಮೆ ಹುಳುವಿನ ತಳಿ ಅಭಿವೃದ್ಧಿ ಮತ್ತು ಪ್ರಯೋಗಾಲಯಗಳ ಬಲವರ್ಧನೆ ಮಾಡುವುದರಿಂದ ಒಟ್ಟಾರೆ ರೇಷ್ಮೆ ಉದ್ದಿಮೆ ಅಭಿವೃದ್ಧಿಗೊಳ್ಳಲು ಅವಕಾಶವಾಗುತ್ತದೆ. ಇದರಿಂದ ರೇಷ್ಮೆ ಭಾಗೀದಾರರು ಹೊಸ ತಾಂತ್ರಿಕತೆಗಳ ಉಪಯೋಗ ಪಡೆದು ಗುಣಮಟ್ಟದ ರೇಷ್ಮೆ ಉತ್ಪಾದಿಸಲು ಸಾಧ್ಯವಾಗುತ್ತದೆ. ಇದರಿಂದ ರೇಷ್ಮೆ ಭಾಗೀದಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಅನುಕೂಲವಾಗುತ್ತದೆ.

ಸದರಿ ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2851-00-107-1-80 – ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆಯಡಿ ಒದಗಿಸಿರುವ ರೂ. 5142.00 ಲಕ್ಷಗಳ ಅನುದಾನದಲ್ಲಿ ರೂ.500.00 ಲಕ್ಷಗಳನ್ನು ಭರಿಸಲಾಗುವುದೆಂದು ಹಾಗೂ ಸದರಿ ಯೋಜನೆಯ ಫಲಾನುಭವಿಗಳು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಮತ್ತು ರೇಷ್ಮೆ ಭಾಗೀದಾರರಾಗಿರುತ್ತಾರೆ ಎಂದು ತಿಳಿಸುತ್ತಾ, ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ಪು.ತಿ.ನೋ. . . .

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಸಂಶೋಧನೆಯ ವೈಜ್ಞಾನಿಕ ಉಪಕರಣಗಳ ನವೀಕರಣ ಮತ್ತು ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಉನ್ನತೀಕರಣಗೊಳಿಸಲು, ರೇಷ್ಮೆ ಹುಳುಗಳ ಸಾಕಾಣಿಕೆಯಲ್ಲಿ ಮತ್ತು ಗೂಡಿನ ನಂತರ ಚಟುವಟಿಕೆಗಳಲ್ಲಿ ಹೊಸ ತಂತ್ರಜ್ಞಾನವನ್ನು ರೇಷ್ಮೆ ಭಾಗೀದಾರರಿಗೆ ತಲುಪಿಸುವ, ರೇಷ್ಮೆ ಉದ್ಯಮವನ್ನು ಲಾಭದಾಯಕಗೊಳಿಸಲು ಉತ್ಪಾದನಾ ವೆಚ್ಚದಲ್ಲಿ ಕಡಿತಗೊಳಿಸಿ ಹೆಚ್ಚಿನ ಸಂಶೋಧನಾ ಕಾರ್ಯಕ್ರಮವನ್ನು ಕೈಗೊಳ್ಳುವ ಸಂಬಂಧ ತಲಘಟ್ಟಪುರದಲ್ಲಿ ಸ್ಥಾಪಿಸಿರುವ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಬಲವರ್ಧನೆ ಮಾಡಲು ಉದ್ದೇಶಿಸಿರುವ ಹೊಸ ಕಾರ್ಯಕ್ರಮವನ್ನು ರೂ. 500.00 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಮತ್ತು ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2851-00-107-1-80 – ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆಯಡಿ ಒದಗಿಸಿರುವ ರೂ. 5142.00 ಲಕ್ಷಗಳಿಂದ ಭರಿಸಲು ಸರ್ಕಾರವು ನಿರ್ಧರಿಸಿರುವ ಕಾರಣ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ತೋಇ 109 ರೇಕೃವಿ 2016,**
**ಬೆಂಗಳೂರು, ದಿನಾಂಕ 11-07-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಸಂಶೋಧನೆಯ ವೈಜ್ಞಾನಿಕ ಉಪಕರಣಗಳ ನವೀಕರಣ ಮತ್ತು ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಉನ್ನತೀಕರಣಗೊಳಿಸಲು, ರೇಷ್ಮೆ ಹುಳುಗಳ ಸಾಕಾಣಿಕೆಯಲ್ಲಿ ಮತ್ತು ಗೂಡಿನ ನಂತರ ಚಟುವಟಿಕೆಗಳಲ್ಲಿ ಹೊಸ ತಂತ್ರಜ್ಞಾನವನ್ನು ರೇಷ್ಮೆ ಭಾಗೀದಾರರಿಗೆ ತಲುಪಿಸುವ, ರೇಷ್ಮೆ ಉದ್ಯಮವನ್ನು ಲಾಭದಾಯಕಗೊಳಿಸಲು ಉತ್ಪಾದನಾ ವೆಚ್ಚದಲ್ಲಿ ಕಡಿತಗೊಳಿಸಿ ಹೆಚ್ಚಿನ ಸಂಶೋಧನಾ ಕಾರ್ಯಕ್ರಮವನ್ನು ಕೈಗೊಳ್ಳುವ ಸಂಬಂಧ ತಲಘಟ್ಟಪುರದಲ್ಲಿ ಸ್ಥಾಪಿಸಿರುವ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಬಲವರ್ಧನೆ ಮಾಡಲು ಉದ್ದೇಶಿಸಿರುವ ಹೊಸ ಕಾರ್ಯಕ್ರಮವನ್ನು ರೂ. 500.00 ಲಕ್ಷ (ಐದು ನೂರು ಲಕ್ಷಗಳು ಮಾತ್ರ) ಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಈ ವೆಚ್ಚವನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ 2851-00-107-1-80 – ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆಯಡಿ ಒದಗಿಸಿರುವ ರೂ. 5142.00 ಲಕ್ಷಗಳಿಂದ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 20 ಎಫ್‌ಆರ್‌ಓ 2016, ದಿನಾಂಕ 24-06-2016 ರ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 320 ವೆಚ್ಚ-4/2016, ದಿನಾಂಕ 16-06-2016 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್. ಎಲ್ ಚಿನ್ನಮ್ಮ 11/7
(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.